ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ರೇಷ್ಮೆ ಸಚಿವರು).—

ಅ) ರಾಜ್ಯದಲ್ಲಿ ಇರುವ ರೇಷ್ಮೆ ರೀಲಿಂಗ್ ಕೇಂದ್ರಗಳು.—

ಸರ್ಕಾರಿ ರೀಲಿಂಗ್ ಕೇಂದ್ರಗಳು — ೬

ಖಾಸಗೀ ರೀಲಿಂಗ್ ಕೇಂದ್ರಗಳು — ೯೦೪೦

ನಷ್ಟದಲ್ಲಿ ನಡೆಯುತ್ತಿರುವ ಕೇಂದ್ರಗಳು.—

ಸರ್ಕಾರಿ ರೀಲಿಂಗ್ ಕೇಂದ್ರಗಳು — ೬

ಖಾಸಗಿ ರೀಲಿಂಗ್ ಕೇಂದ್ರಗಳು — ಮಾಹಿತಿ ಇರುವುದಿಲ್ಲ.

ನಷ್ಟದ ಮೊತ್ತ : ವರ್ಷಕ್ಕೆ ಸಮಾರು ೨೮೩ ೨೫ ಲಕ್ಷ ರೂಪಾಯಿಗಳು.

ಹೊಸದಾಗಿ ರೀಲಿಂಗ್ ಕೇಂದ್ರ ತೆರೆಯಲು ಬೇಕಾದ ಅವಶ್ಯಕತೆಗಳು.—

೧. ಕಚ್ಚಾ ಸಾಮಗ್ರಿಯಾದ ರೇಷ್ಮೆ ಗೂಡಿನ ದೊರೆಯುವಿಕೆ.

೨. ರೇಷ್ಮೆ ನೂಲು ಬಿಚ್ಚಲು ಬೇಕಾದ ಸೂಕ್ತ ನೀರಿನ ಸೌಲಭ್ಯ.

೩. ನೂಲು ಬಿಚ್ಚಾಣಿಕೆಯಲ್ಲಿ ಅನುಭವವುಳ್ಳ ಕೆಲಸಗಾರರು.

೪. ಸಾಕಷ್ಟು ಬಂಡವಾಳದ ಹೂಡಿಕೆ.

ಹೊಸ ಕೇಂದ್ರಗಳನ್ನು ತೆರೆಯುವ ಉದ್ದೇಶವಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು.—ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಅರಣ್ಯದಲ್ಲಿ ಹಸಿರು ಮರಗಳನ್ನು ಕಡಿದಿರುವುದು.

೧೪೫೬. ಶ್ರೀ ಗೋಪಾಲ ಮಂಕುಂದ ಕಾನಡೆ(ಸಿಸಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಸಿರು ಮರ ಕಡಿದು ಲಕ್ಷಾಂತರ ರೂಪಾಯಿಯಷ್ಟು ನಷ್ಟ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಅಂತವರ ಮೇಲೆ ತೆಗೆದುಕೊಂಡ ಕ್ರಮವೇನು ?

ಆ) ಒಟ್ಟು ಮರ ಕಡಿದ ಸಂಖ್ಯೆಗಳೆಷ್ಟು ? ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ಮರ ಕಡಿದಿದ್ದಾರೆ ?

ಇ) ಇದಕ್ಕೆ ಸಂಬಂಧಪಟ್ಟ ಅಧಿಕಾರಿ ವರ್ಗದವರಾ ಶಾಮೀಲಾಗಿದ್ದಾರೆಯೇ ? ಈ ವಿಷಯವನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಏನೂ ಕ್ರಮ ಕೈಗೊಳ್ಳದಿರಲು ಕಾರಣವೇನು ?

ಶ್ರೀ ಜಿ.ಎಸ್. ಬಾಗಲಕೋಟ್(ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹಸಿರು ಮರಗಳನ್ನು ಕಡಿದ ಕೆಲವು ಪ್ರಕರಣಗಳು ಗಮನಕ್ಕೆ ಬಂದಿದೆ. ಆದರೆ ಇಲಾಖೆಗೆ ನಷ್ಟವಾಗಿಲ್ಲ. ಇಂತಹ ಪ್ರಕರಣಗಳಲ್ಲಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗಿದೆ.